# ಕರ್ನಾಟಕ ಸರ್ಕಾರ

ಸಂ:ಹಿಂವಕ ಇ/ತ-1/ಪ.ಪೂ.ತ/CR-01/2022-23 ಆಯುಕ್ತರ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ:16-ಡಿ, 3ನೇ ಮಹಡಿ, ಡಿ.ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052, ದಿನಾಂಕ:20.01.2023.

ಗೆ,

ರಾಜ್ಯದ ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಳ ಕಲ್ಯಾಣಾಧಿಕಾರಿಗಳ
ಮೂಲಕ ಆಯಾ ಜಿಲ್ಲೆಯ ಸಂಬಂಧಪಟ್ಟ ಎಲ್ಲಾ ತಾಲ್ಲೂಕು
ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ.

ಮಾನ್ಯರೆ,

ವಿಷಯ: 2022-23ನೇ ಸಾಲಿಗೆ ಇಲಾಖೆಯಿಂದ ನೀಡುವ ವಿವಿಧ ಪರೀಕ್ಷಾ ಪೂರ್ವ ತರಬೇತಿಗಳಿಗಾಗಿ ಆಯ್ಕೆಯಾದ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿಗೆ ಇಲಾಖೆಯಿಂದ ನೀಡುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಗಳಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ನಿಮ್ಮ ಜಿಲ್ಲೆಯ ಸಂಬಂಧಪಟ್ಟ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ ಕೆಳಕಂಡ ಮಾರ್ಗಸೂಚಿಗಳನ್ವಯ ಮಾಡುವುದು.

1. ವಿವಿಧ ಪರೀಕ್ಷಾ ಪೂರ್ವ ತರಬೇತಿಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾಲ್ಲೂಕುವಾರು ಪಟ್ಟಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಇ-ಮೇಲ್ ಮೂಲಕ ಕಳುಹಿಸಿದೆ.
2. ಆಯ್ಕೆಯಾದ ಅಭ್ಯರ್ಥಿಗಳ ಸದರಿ ಪಟ್ಟಿಯನ್ನು ಪಡೆದು, ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಆಯಾ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ ಪರಿಶೀಲಿಸುವುದು.
3. ದಿನಾಂಕ:20.01.2023 ರಿಂದ 24.01.2023 ರವರೆಗೆ ದಾಖಲಾತಿಗಳನ್ನು ಪರಿಶೀಲನೆ ಮಾಡುವುದು ಹಾಗೂ ಅಭ್ಯರ್ಥಿಗಳು ಅರ್ಹ ಅಥವಾ ಅನರ್ಹ ಎಂದು ಷರಾ ಭಾಗದಲ್ಲಿ ನಮೂದಿಸುವುದು.
4. ದಿನಾಂಕ:24.01.2023ರ ಸಂಜೆ 5.00 ಗಂಟೆಯ ವರೆಗೆ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಸಿದ್ಧಪಡಿಸಿ, ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
5. ಈ ರೀತಿ ವಿವಿಧ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಂದ ಪಡೆದ ಮಾಹಿತಿಯನ್ನು ಕ್ರೋಢೀಕರಿಸಿ, ಆಯಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಇ-ಮೇಲ್ bcwd.training@gmail.com ಗೆ ದಿನಾಂಕ:25.01.2023 ರ ಅಪರಾಹ್ನ 1.00 ಗಂಟೆಯೊಳಗೆ ಕಳುಹಿಸುವುದು.
6. ದಾಖಲೆ ಪರಿಶೀಲನೆ ಸಂದರ್ಭದಲ್ಲಿ ಪರಿಶೀಲಿಸಬೇಕಾದ ಮೂಲ ದಾಖಲಾತಿಗಳು.

| | | |
|---|---|---|
| 1. | 10ನೇ ತರಗತಿ ಅಂಕ ಪಟ್ಟಿ | ಪರೀಕ್ಷಾ ಪೂರ್ವ ತರಬೇತಿಗಾಗಿ 35 ವರ್ಷ ವಯೋಮಿತಿ ನಿಗಧಿಪಡಿಸಲಾಗಿದೆ. ಆದ್ದರಿಂದ ಅಭ್ಯರ್ಥಿಗಳು 35 ವರ್ಷದೊಳಗಿನವರಾಗಿರಬೇಕು ಎಂಬುದಾಗಿ ಖಚಿತಪಡಿಸಿಕೊಳ್ಳಲು 10ನೇ ತರಗತಿ ಅಂಕ ಪಟ್ಟಿ ಪರಿಶೀಲಿಸುವುದು.<br>ಒಂದೊಮ್ಮೆ 35 ವರ್ಷ ಮೀರಿದ್ದರೆ, ಆಯ್ಕೆಗೆ ಅರ್ಹರಿರುವುದಿಲ್ಲ, ಎಂದು ಷರಾದಲ್ಲಿ ಕಾರಣ ನಮೂದಿಸಿ ಹಿಂದಿರುಗಿಸುವುದು. |
| 2. | ಪದವಿ ಅಂಕ ಪಟ್ಟಿ | ಯು.ಪಿ.ಎಸ್.ಸಿ/ ಕೆ.ಎ.ಸ್/ ಆರ್.ಆರ್.ಬಿ/ ಎಸ್.ಎಸ್.ಸಿ / ಬ್ಯಾಂಕಿಂಗ್ ಹಾಗೂ ಗ್ರೂಪ್-ಸಿ ತರಬೇತಿಗೆ ಪದವಿ ಪೂರ್ಣಗೊಳಿಸಿರಬೇಕೆಂಬ ನಿಯಮವಿದ್ದು, ಪದವಿ ಪೂರ್ಣಗೊಳಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>ಕೆಲವು ಸಂದರ್ಭದಲ್ಲಿ ಅಂತಿಮ ಸೆಮಿಸ್ಟರ್‌ನ ಫಲಿತಾಂಶ ಪ್ರಕಟಗೊಂಡು, ಮೂಲ ಅಂಕ ಪಟ್ಟಿ ವಿಶ್ವವಿದ್ಯಾಲಯದಿಂದ ಪಡಿಯದೇ ಇದ್ದಲ್ಲಿ ಪ್ರಾವಿಜನಲ್ ಮಾರ್ಕ್ಸ್ ಕಾರ್ಡ್ ನೀಡಿದ್ದರೆ, ಪ್ರಾವಿಜನಲ್ ಮಾರ್ಕ್ಸ್ ಕಾರ್ಡ್ ನೈಜತೆ ಪರಿಶೀಲಿಸಿ ಖಚಿತ ಪಡಿಸಿಕೊಂಡು, ಆಯ್ಕೆಗೆ ಪರಿಗಣಿಸುವುದು.<br>ಮೂಲ ದಾಖಲಾತಿಗಳ ಪರಿಶೀಲನೆ ವೇಳೆ ಎಲ್ಲಾ ಸೆಮಿಸ್ಟರ್‌ನ ಅಂಕಪಟ್ಟಿಗಳು ಅಥವಾ Convocation Certificate ನ್ನು ಹಾಜರುಪಡಿಸದೇ ಇರುವ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಬಾರದು. ಷರಾದಲ್ಲಿ ಕಾರಣಗಳನ್ನು ನಮೂದಿಸಿ ಹಿಂದಿರುಗಿಸಬೇಕು. |
| 3. | ಜಾತಿ ಪ್ರಮಾಣ ಪತ್ರ | ಹಿಂದುಳಿದ ವರ್ಗಗಳ ಜಾತಿಗೆ ಸೇರಿದ ಬಗ್ಗೆ ತಹಶೀಲ್ದಾರರಿಂದ ನೀಡಲಾದ ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವುದು. |
| 4. | ಆದಾಯ ಪ್ರಮಾಣ ಪತ್ರ | ಅಭ್ಯರ್ಥಿಗಳ ಆಯ್ಕೆಗೆ ರೂ.5.00 ಲಕ್ಷ ವಾರ್ಷಿಕ ಆದಾಯ ಮಿತಿ ನೀಡಲಾಗಿದೆ. ಸರ್ಕಾರದ ಆದೇಶದಂತೆ ನಿಯಮಿತ ದಿನಾಂಕದೊಳಗೆ, ರೂ.5.00 ಲಕ್ಷ ವಾರ್ಷಿಕ ಆದಾಯ ಹೊಂದಿರುವ ಬಗ್ಗೆ ಆದಾಯ ಪ್ರಮಾಣ ಪತ್ರವನ್ನು ಪರಿಶೀಲಿಸುವುದು. |
| 5. | ವಿಶೇಷ ಚೇತನ ಪ್ರಮಾಣ ಪತ್ರ | ವಿಶೇಷ ಚೇತನ ಅಭ್ಯರ್ಥಿಗಳಾಗಿದ್ದಲ್ಲಿ, ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಪರಿಶೀಲಿಸುವುದು. |

ಮೂಲ ದಾಖಲೆಗಳ ಪರಿಶೀಲನೆಯ ನಂತರ ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳನ್ನು ಹಿಂದಿರುಗಿಸುವುದು. ಒಂದು ಸೆಟ್ ಜೆರಾಕ್ಸ್ ಪ್ರತಿಯನ್ನು ಪಡೆದು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮಾಹಿತಿಗಾಗಿ ನಿರ್ವಹಿಸುವುದು. ಈ ಮೇಲ್ಕಂಡ ಮಾರ್ಗಸೂಚಿಗಳನ್ವಯ ನಿಗಧಿಪಡಿಸಿದ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು

ಪರಿಶೀಲಿಸಿಸುವುದು. ಅಭ್ಯರ್ಥಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಜರಿದ್ದು, ದಾಖಲೆ ಪರಿಶೀಲನೆಗೆ ಅಗತ್ಯ ಕ್ರಮ ವಹಿಸುವುದು, ದಾಖಲೆ ಪರಿಶೀಲನೆಗೆ ನುರಿತ ಸಿಬ್ಬಂದಿಗಳ ತಂಡವನ್ನು ರಚಿಸಿ, ನಿಯಮಿತ ಅವಧಿಯಲ್ಲಿ ಕಾರ್ಯನಿರ್ವಹಿಸುವುದು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ದಾಖಲೆ ಪರಿಶೀಲನೆಯನ್ನು ಸುಸೂತ್ರವಾಗಿ ನಡೆಸಲು ಅಗತ್ಯವಾದ ಎಲ್ಲಾ ಕ್ರಮವನ್ನು ವಹಿಸುವುದು.

ತಮ್ಮ ವಿಶ್ವಾಸಿ,

ಸಹಿ/-
ಆಯುಕ್ತರು,
ಹಿಂದುಳಿದವರ್ಗಗಲಕಲ್ಯಾಣಇಲಾಖೆ,
ಬೆಂಗಳೂರು.